**ಪರೀಕ್ಷಿದ್ರಾಜನ ಮುಕ್ತಿ :** ಶ್ರಮಿಕ ಋಷಿಯ ಪುತ್ರ ಶೃಂಗಿಯ ಶಾಪಕ್ಕೆ ಒಳಗಾದ ಪರೀಕ್ಷಿದ್ರಾಜನಿಗೆ ಶುಕಮುನಿಗಳು ಭಾಗವತ ಶ್ರವಣವನ್ನು ಮಾಡುತ್ತಾ ಏಳು ದಿನಗಳು ಕಳೆದವು. ಶುಕಮುನಿಗಳು ಆತನ ಕೋರಿಕೆಯಂತೆ ಶ್ರೀಮದ್ಭಾಗವತ ವನ್ನು ಪ್ರವಚನ ಮಾಡಿ ಮುಗಿಸಿದ ಬಳಿಕ ಅಲ್ಲಿಂದ ತೆರಳಲು ರಾಜನ ಅನುಮತಿಯನ್ನು ಕೇಳಿದರು. ಪರೀಕ್ಷಿತನು ಶುಕಾಚಾರ್ಯರಿಗೆ ನಮಸ್ಕರಿಸಿ, "ಗುರುಗಳೇ, ನಿಮ್ಮ ಈ ಭಾಗವತ ಶ್ರವಣದಿಂದಾಗಿ ಈಗ ನನಗೆ ಮರಣಭಯವಿಲ್ಲ. ನನಗೆ ತಕ್ಷಕನೆಂಬ ಸರ್ಪ ಬಂದು ಕಚ್ಚಲಿ. ನಾನು ಈಗ ನಿಮ್ಮ ಅಪ್ಪಣೆ ಮತ್ತು ಮಾರ್ಗದರ್ಶನದಂತೆ ಭಗವಂತನ ಸ್ಮರಣೆಯಲ್ಲಿ ಧ್ಯಾನಾಸಕ್ತನಾಗುವೆನು" ಎಂದು ಹೇಳಿ ಭಗವಂತನ ಧ್ಯಾನದಲ್ಲಿ ಮುಳುಗಿದನು. ಅಲ್ಲಿದ್ದ ಎಲ್ಲ ಋಷಿಗಳೂ ಸಾಧುಗಳೂ ರಾಜನನ್ನು ಹರಸಿ, ಅಲ್ಲಿಂದ ತೆರಳಿದರು. ಪರೀಕ್ಷಿದ್ರಾಜನು ಧ್ಯಾನ ಮಾಡುತ್ತಾ ಬ್ರಹ್ಮಸ್ವರೂಪವನ್ನು ಪಡೆದನು. ಗುಪ್ತವೇಷದಲ್ಲಿ ಸರ್ಪರೂಪಿಯಾಗಿ ಬಂದ ತಕ್ಷಕನು ಪರೀಕ್ಷಿತನನ್ನು ಕಚ್ಚಿದನು. ರಾಜನ ದೇಹ ಸುಟ್ಟು ಬೂದಿಯಾಯಿತು.

ಇದನ್ನೆಲ್ಲಾ ನೋಡುತ್ತ ನಿಂತಿದ್ದ ಪರೀಕ್ಷಿದ್ರಾಜನ ಹಿರಿಯ ಮಗ ಜನಮೇಜಯನು ತನ್ನ ತಂದೆಯನ್ನು ಕಚ್ಚಿದ ತಕ್ಷಕ ಮತ್ತು ಆತನ ಸರ್ಪಕುಲವನ್ನೆಲ್ಲಾ ನಾಶಮಾಡುವುದಾಗಿ ನಿರ್ಧರಿಸಿದನು. ಇದಕ್ಕಾಗಿ ಸರ್ಪಯಾಗವನ್ನು ಮಾಡತೊಡಗಿದನು. ಲೋಕದಲ್ಲಿನ ಸರ್ಪಗಳೆಲ್ಲಾ ಸುಡುಸುಡು ಅಗ್ನಿಯಲ್ಲಿ ಬಿದ್ದು, ಸುಟ್ಟು ಕರಕಲಾಗತೊಡಗಿದವು. ತಕ್ಷಕನು ಮಾತ್ರ ಬರಲಿಲ್ಲ. ಏಕೆಂದರೆ ಅವನು ಇಂದ್ರನ ರಕ್ಷಣೆಯಲ್ಲಿದ್ದನು. ಇದನ್ನು ತಿಳಿದ ಜನಮೇಜಯನು, "ಋಷಿಗಳೇ, ಪಾಪಿಯಾದ ತಕ್ಷಕನಿಗೆ ರಕ್ಷಣೆ ನೀಡಿದ ಇಂದ್ರನ ಸಮೇತ ಅವನನ್ನು ಯಜ್ಞಕುಂಡಕ್ಕೆ ಆಹ್ವಾನಿಸಿ" ಎಂದನು. ಋಷಿಗಳು ಮಂತ್ರ ಪಠಿಸುತ್ತಿದ್ದಂತೆಯೇ ಇಂದ್ರನ ಸಿಂಹಾಸನದಲ್ಲಿ ಅಡಗಿದ್ದ ತಕ್ಷಕನು ಇಂದ್ರನ ಜೊತೆಯಲ್ಲಿ ಜನಮೇಜಯನು ನಡೆಸುತ್ತಿದ್ದ ಯಜ್ಞಕುಂಡದತ್ತ ಧಾವಿಸಿ ಬರತೊಡಗಿದನು.

ಅಷ್ಟರಲ್ಲಿ ದೇವತೆಗಳ ಪುರೋಹಿತರಾದ ಬೃಹಸ್ಪತಿಗಳು ಜನಮೇಜಯನಲ್ಲಿಗೆ ಬಂದು, ಯಾಗವನ್ನು ನಿಲ್ಲಿಸಿದರು. ಜನಮೇಜಯನಿಗೆ, "ಜನನ ಮತ್ತು ಮರಣಗಳು ಜೀವನದ ಎರಡು ಘಟ್ಟಗಳು. ಜನನದ ಹಿಂದೆಯೇ ಮರಣವು ನಿಶ್ಚಿತವಾಗಿರುತ್ತದೆ. ಅದಕ್ಕೆ ಯಾರೂ ಹೊರತಾಗಿರುವುದಿಲ್ಲ. ತಕ್ಷಕನು ಕೇವಲ ನಿಮಿತ್ತಮಾತ್ರನಾಗಿದ್ದಾನೆ" ಎಂದು ಉಪದೇಶಿಸಿದರು. ಜನಮೇಜಯನು ಹಿರಿಯರ ಮಾತನ್ನು ಗೌರವಿಸಿ, ಸರ್ಪಯಾಗವನ್ನು ನಿಲ್ಲಿಸಿದನು. *(ಮುಗಿಯಿತು)*

## " ಅವರು ಸಾಕ್ಷಾತ್ ಆದ್ಯಾಶಕ್ತಿ, ಜಗಜ್ಜನನಿ "



ಸ್ವಾಮಿ ಶಿವಾನಂದರು ತಮ್ಮಿಂದ ಮಂತ್ರದೀಕ್ಷೆ ಪಡೆದಿದ್ದ ಒಬ್ಬಳು ಹುಡುಗಿಗೆ ಹೀಗೆಂದರು: "ಶ್ರೀಮಾತೆಯ ಜೀವನಚರಿತ್ರೆಯನ್ನು ನೀನು ಓದಿರಬೇಕಲ್ಲವೆ? ಈ ಯುಗದ ಸಮಗ್ರ ನಾರೀಕುಲದ ಆದರ್ಶವಾಗಿದ್ದಾರೆ ಅವರು. ಅವರ ಜೀವನ ಅತ್ಯದ್ಭುತ. ನರದೇಹಧಾರಣೆ ಮಾಡಿ ಸಾಧಾರಣ ಗೃಹಸ್ಥ ವಧುವಿನಂತೆ ಇದ್ದರು. ಆದರೆ ಅವರು ಸಾಕ್ಷಾತ್ ಆದ್ಯಾಶಕ್ತಿ, ಜಗಜ್ಜನನಿಯೆ ಅಲ್ಲದೆ ಅನ್ಯರಲ್ಲ. ಶಾಸ್ತ್ರಗಳಲ್ಲಿ ಯಾರು ಕಾಲೀ, ತಾರಾ, ಮಹಾವಿದ್ಯೆಯರೆಂದು ವರ್ಣಿತರಾಗಿದ್ದಾರೆಯೊ ಆ ದಶಮಹಾವಿದ್ಯೆಯರೆಲ್ಲರೂ ಏಕೀಭವಿಸಿದ ಪ್ರತಿರೂಪವಾಗಿದ್ದಾರೆ ಶ್ರೀಮಾತೆ. ಠಾಕೂರರ ಯುಗಧರ್ಮ ಸಂಸ್ಥಾಪನಾರೂಪದ ನರಲೀಲೆಯನ್ನು ಪೂರ್ಣಗೊಳಿಸುವುದಕ್ಕಾಗಿ ಜಗತ್ತಿನಲ್ಲಿ ಅವತೀರ್ಣರಾಗಿದ್ದಾರೆ. ಸಾಧಾರಣ ಮಾನವರು ಅವರನ್ನು ಗುರುತಿಸಬಲ್ಲರೆ? ನಾವೂ ಮೊದಮೊದಲು ಅವರನ್ನು ಸ್ವಲ್ಪವೂ ಅರಿಯಲಾರದೆ ಹೋದೆವು. ತಮ್ಮ ಈಶ್ವರೀಭಾವವನ್ನು ಎಷ್ಟು ಸಮರ್ಪಕವಾಗಿ ಅಡಗಿಸಿಟ್ಟುಕೊಂಡರೆಂದರೆ ಅವರ ನಿಜವನ್ನು ಒಂದಿನಿತೂ ಕಂಡುಹಿಡಿಯಲು ಆಗುತ್ತಿರಲಿಲ್ಲ. ಅವರು ಯಾರು ಎಂಬುದು ಠಾಕೂರರೊಬ್ಬರಿಗೆ ಮಾತ್ರ ಗೊತ್ತಿತ್ತು; ಅಲ್ಲದೆ ಸ್ವಾಮೀಜಿಗೂ ಒಂದು ಕಿಂಚಿತ್ ಅರಿವಾಗಿತ್ತು. ಸ್ವಾಮೀಜಿ ಪಾಶ್ಚಾತ್ಯ ದೇಶಗಳಿಗೆ ಹೋಗುವ ಮುನ್ನ ಶ್ರೀಮಾತೆಯೊಬ್ಬರಿಗೇ ತಿಳಿಸಿದರು ; ಅವರ ಆಶೀರ್ವಾದವನ್ನು ಪಡೆದ ಮೇಲೆಯೆ ಸ್ವಾಮೀಜಿ ಸಮುದ್ರ ದಾಟಿದ್ದು. ಅಮ್ಮನವರು ಅವರಿಗೆ ಹೃತ್ಪೂರ್ವಕವಾಗಿ ಆಶೀರ್ವಾದ ಮಾಡಿ ಹೇಳಿದರಂತೆ: 'ಮಗೂ, ನೀನು ದಿಗ್ವಿಜಯಿಯಾಗಿ ಹಿಂತಿರುಗು. ನಿನ್ನ ಮುಖದಲ್ಲಿ ಸರಸ್ವತಿ ನೆಲೆಸಲಿ!' ಹಾಗೆಯೆ ಆಯಿತು! ತಾಯಿಯ ಆಶೀರ್ವಾದದಿಂದ ಸ್ವಾಮೀಜಿ ವಿಶ್ವವಿಜಯಿಯಾದರು."

*('ಗುರುವಿನೊಡನೆ ದೇವರೊಡನೆ', ಪು.297)*